ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು **ಪ್ರಥಮ ದರ್ಜೆಯ ನ್ಯಾಯಿಕ**

**ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ.1886/2022**

ಡಿಡಬ್ಲ್ಯೂ - 1

**ಪಾಟೀ ಸವಾಲುಃ ದೂರುದಾರರ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದಃ**

ನಾನು 4 ನೇ ತರಗತಿವರೆಗೆ ಓದಿದ್ದೇನೆ. ನಾನು ಯಾವುದೇ ವ್ಯಾಪಾರ ವ್ಯವಹಾರ ಹಾಗೂ ಎಜನ್ಸಿ ಕೆಲಸ ಮಾಡುವುದಿಲ್ಲ. ನಮ್ಮ ಮನೆತನಕ್ಕೆ 22 ಎಕರೆ ಜಮೀನು ಇದೆ ಎಂದು ತೋರಿಸಲು ಯಾವುದೇ ಉತಾರವನ್ನು ಹಾಜರುಪಡಿಸಿರುವುದಿಲ್ಲ. ಸದರಿ ಜಮೀನಿನಿಂದ ಬರುವ ಉತ್ಪನ್ನಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಹಾಗೂ ಬೈಲಹೊಂಗಲದಲ್ಲಿ ಇರುವ ನಮ್ಮ ಸ್ವಂತ ಮನೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

2015 ರಲ್ಲಿ ನನ್ನ ಮಗ ರವಿಚಂದ್ರ ಇತನ ಎರಡು ಕಾಲುಗಳು ಸ್ವಾಧೀನತೆ ಕಳೆದುಕೊಂಡಿರುತ್ತಾನೆ ಎಂದರೆ ಸರಿ. ಆತನಿಗೆ ನಡೆಯಲು ಆಗುತ್ತಿರಲಿಲ್ಲ ಎಂದರೆ ಸರಿ. ಆತನನ್ನು ದೊಡ್ಡ ಆಸ್ಪತ್ರೆಗೆ ತೋರಿಸಿದ ಬಳಿಕ ನಡೆದಾಡಲು ಬರುತ್ತಿರುತ್ತದೆ ಎಂದರೆ ಸರಿ. ರಾಜಶೇಖರ ಇತನು ಏರಟೇಲ್ ಕಂಪನಿ ಹಾಗೂ ಜನಸ್ನೇಹಿ ಕಂಪನಿಗಳಲ್ಲಿ ಕಡಿಮೆ ಆದಾಯಕ್ಕೆ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಹಾಗೂ ಕಳೆದ 10ವರ್ಷಗಳಿಂದ ನಮ್ಮ ಮನೆಯ ಆರ್ಥಿಕ ಪರಿಸ್ಥಿತಿ ಸರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. 2015 ರಿಂದ ನಮ್ಮ ಮನೆತನಕ್ಕೆ ಹೊಲಗಳಿಂದ ಹೆಚ್ಚಿನ ಉತ್ಪನ್ನ ಬಂದಿರುವುದಿಲ್ಲ ಎಂದರೆ ಸರಿಯಲ್ಲ. 2015 ರಿಂದ ನಮ್ಮ ಮನೆತನಕ್ಕೆ ಸರಿಯಾದ ಆದಾಯ ಇಲ್ಲದೇ ಇರುವುದರಿಂದ ನಮ್ಮ ಜಮೀನುಗಳನ್ನು ಮಾರಾಟಕ್ಕೆ ಹಚ್ಚಿರುತ್ತೇವೆ ಎಂದರೆ ಸರಿಯಲ್ಲ.

ಬೈಲಹೊಂಗಲದ ಧಾರವಾಡದ ಬೈ ಪಾಸ ರಸ್ತೆಯ ಬಳಿ ಸರ್ವೇ ಸಂಖ್ಯೆ 176/15 ರ ಜಮೀನನ್ನು ಹೊಂದಿರುತ್ತೇವೆ ಎಂದರೆ ಸರಿ. ಅದರ ಪೈಕಿ 12 ಗುಂಟೆ ಜಮೀನನ್ನು ಮಾರಾಟಕ್ಕೆ ಹಚ್ಚಿರುತ್ತೇವೆ ಎಂದರೆ ಸರಿ. ನಮ್ಮ ಮನೆತನದ ಸಾಲವನ್ನು ತಿರಿಸಲು ಸದರಿ ಜಮೀನನ್ನು ಮಾರಾಟಕ್ಕೆ ಇಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೇರೆ ಬದಿಯಲ್ಲಿ ಆಸ್ತಿ ಖರೀದಿ ಉದ್ದೇಶದಿಂದ ಮಾರಾಟಕ್ಕೆ ಇಟ್ಟಿರುತ್ತೇವೆ ಎನ್ನುತ್ತಾರೆ.

ನನಗೆ ಈಗ ತೋರಿಸಿದ ಪತ್ರಿಕೆಯಲ್ಲಿ ಸದರಿ ಜಮೀನಿನ ಮಾರಾಟದ ನೋಟಿಸನ್ನು ನೀಡಿರುತ್ತೇವೆ ಎಂದರೆ ಸರಿ ಸದರಿ ಪತ್ರಿಕೆಯನ್ನು ಈಗ ನಿಶಾನೆ ಪಿ 10 ಸಂಬಂಧಪಟ್ಟ ಭಾಗವನ್ನು ನಿಶಾನೆ ಪಿ 10ಎ ಎಂದು ಗುರುತಿಸಲಾಯಿತು. ಸದರಿ ನೋಟಿಸನಲ್ಲಿ ಸಾಲಕ್ಕಾಗಿ ಮಾರಾಟಕ್ಕೆ ಇಟ್ಟಿರುತ್ತೇವೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಹಾಗಾಗಿ 2015 ರಿಂದ ಆರ್ಥಿಕ ತೊಂದರೆ ಇದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ರಾಜಶೇಖರ ಇತನು ಜನಸ್ನೇಹಿ ಕಂಪನಿಯಲ್ಲಿ ಕಮಿಷನ್ ಏಜಂಟ್ ಆಗಿ ಕೆಲಸ ಮಾಡುತ್ತಿದ್ದನು ಎಂದರೆ ಸರಿ. ಅಲ್ಲಿ ಸಾರ್ವಜನಿಕರ ಠೇವಣಿ ಹಣಗಳನ್ನು ತಂದು ಇಡಿಸುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಯಾವುದೇ ವ್ಯಕ್ತಿ ಒಂದು ಬ್ಯಾಂಕನಲ್ಲಿ ಠೇವಣಿಯನ್ನು ಇಟ್ಟಲ್ಲಿ, ಸಂಬಂಧಪಟ್ಟ ಬ್ಯಾಂಕನಿಂದ ಪ್ರಮಾಣ ಪತ್ರವನ್ನು ನೀಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಅಂತೆಯೇ, ನಾನು ಯಾವುದೇ ಬ್ಯಾಂಕನಲ್ಲಿ ಠೇವಣಿ ಇಟ್ಟಲ್ಲಿ, ಸಂಬಂಧಪಟ್ಟ ಬ್ಯಾಂಕನಿಂದ ಪ್ರಮಾಣ ಪತ್ರವನ್ನು ನೀಡುತ್ತಾರೆ ಎಂದರೆ ಸರಿ. ನನ್ನ ಮಗ ರಾಜಶೇಖರ ಇತನು ಜನಸ್ನೇಹಿ ಕಂಪನಿಯ ಮಾಲೀಕ ಅಥವಾ ಪಾಲುದಾರರಾಗಿರುವುದಿಲ್ಲ ಎಂದರೆ ಸರಿ. ಠೇವಣಿ ಹಣವನ್ನು ವಾಪಸ್ಸ ನೀಡುವ ಕೆಲಸ ಬ್ಯಾಂಕನದ್ದೆ ಆಗಿರುತ್ತದೆ ಎಂದರೆ ಸರಿ. ಸದರಿ ಕಂಪನಿಯಲ್ಲಿಟ್ಟ ಹಣವನ್ನು ಸಾರ್ವಜನಿಕರಿಗೆ ವಾಪಸ್ಸ ನೀಡುವ ಹೊರೆ ನನ್ನ ಮಗನ ಮೇಲೆ ಇರುವುದಿಲ್ಲ ಎಂದರೆ ಸರಿ.

ಜನಸ್ನೇಹಿ ಕಂಪನಿಯಲ್ಲಿ ಫಿರ್ಯಾದಿದಾರರು ಠೇವಣಿ ಹಣವನ್ನು ಇಟ್ಟಿದ್ದು, ಅದರ ಭದ್ರತೆಗಾಗಿ ನನ್ನ ಮಗ ರಾಜಶೇಖರ ಇತನು ಚೆಕ್ ಹಾಗೂ ಬಾಂಡ್ ನ್ನು ಫಿರ್ಯಾದಿದಾರರಿಗೆ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಫಿರ್ಯಾದಿದಾರರಿಂದ ಹಣವನ್ನು ಪಡೆದುಕೊಂಡಿದ್ದರು ಸಹ ಹಾಗೂ ಅದರ ವಾಪಸ್ಸಾತಿಗಾಗಿ ಚೆಕ್ಕನ್ನು ನೀಡಿದ್ದರು ಸಹ ಅದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ರಾಜಶೇಖರ ಇತನು ಖಾಲಿ ಚೆಕ್ ಹಾಗೂ ಬಾಂಡ್ ನ್ನು ಫಿರ್ಯಾದಿದಾರರಿಗೆ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ನಾನು ಫಿರ್ಯಾದಿದಾರರಿಂದ 5 ಲಕ್ಷ ಹಣವನ್ನು ಪಡೆದುಕೊಂಡಿದ್ದು, ಅದರ ಮರುಪಾವತಿಗಾಗಿ ಬಾಂಡ್ ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಬಾಂಡ್ ಗೆ ನಾನು ಹಾಗೂ ನನ್ನ ಇಬ್ಬರೂ ಮಕ್ಕಳು ಸಹಿ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಅವರು ನೀಡಿದ ಹಣವನ್ನು ವಾಪಸ್ಸ ಕೇಳಲು ನಮ್ಮ ಮನೆಗೆ ಬಂದಾಗ ಸದರಿ ಚೆಕ್ಕನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಿಶಾನೆ ಪಿ 1 ಚೆಕ್ಕನ್ನು ಖಾಲಿ ಚೆಕ್ಕನ ಮೇಲೆ

ಸಹಿ ಮಾಡಿ ನನ್ನ ಮಗನಿಗೆ ನೀಡಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ನಿಶಾನೆ ಪಿ 1 ಚೆಕ್ಕನ ಮೇಲೆ 5 ಲಕ್ಷ ರೂಪಾಯಿ ಹಣ ಎಂದು ನಮೂದಿಸಿದ ಬಳಿಕವೇ ಸದರಿ ಚೆಕ್ಕಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಚೆಕ್ಕನ್ನು ಓದಿರುವುದಿಲ್ಲ. ನಾನು ಪಿರ್ಯಾದಿಗೆ 5 ಲಕ್ಷ ರೂಪಾಯಿ ಹಣವನ್ನು ನೀಡುವುದನ್ನು ತಿಳಿದಿದ್ದು, ಸದರಿ ಚೆಕ್ಕನ ಮೇಲೆ 5 ಲಕ್ಷ ಎಂದು ಬರೆದಿರುವುದನ್ನು ತಿಳಿದುಕೊಂಡೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮಗ ರಾಜಶೇಖರ ಇತನು ಜನಸ್ನೇಹಿ ಕಂಪನಿಗೂ ಮೊದಲು ಏರಟೇಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದನು ಎಂದರೆ ಸರಿ. ಸದರಿ ಏರಟೇಲ್ ಕಂಪನಿ ಹೊಸೂರು ರಸ್ತೆಯ ಸೊಗಲದ ಕಾಂಪ್ಲೇಕ್ಸನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಮಟೆ, ಹುಲಕುಂದ ಹಾಗೂ ಅಗಸಗಿ ಎಂಬುವವರು ಸಹ ಏರಟೇಲ್ ಕಂಪನಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ರಾಜು ಸೋಗಲದ ರವರು ಸದರಿ ಏರಟೇಲ್ ಕಂಪನಿಯ ಮಾಲೀಕರಾಗಿರುತ್ತಾರೆ ಎಂದರೆ ಗೊತ್ತಿಲ್ಲ.

ಪಿರ್ಯಾದಿದಾರರು ರಾಜು ಸೋಗಲದ ರವರ ಸಹೋದರಿಯಾಗಿರುತ್ತಾರೆ ಎಂದರೆ ಗೊತ್ತಿಲ್ಲ. ಪಿರ್ಯಾದಿದಾರರು ಹಾಗೂ ರಾಜು ಸೋಗಲದ ರವರ ಮನೆಗಳು ಎದುರು ಬದುರು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ರಾಜು ಸೋಗಲದ ಹಾಗೂ ಅವರ ಮನೆತನದ ಸಂಪೂರ್ಣ ಮಾಹಿತಿ ನನಗೆ ಇರುತ್ತದೆ ಎಂದರೆ ಸರಿಯಲ್ಲ. ಪ್ರಕರಣದ ವ್ಯವಹಾರವನ್ನು ಹೊರತುಪಡಿಸಿ ಈ ಮುಂಚೆಯಿಂದಲೂ ನಾನು ಪಿರ್ಯಾದಿದಾರರೊಂದಿಗೆ ಹಣಕಾಸಿನ ವ್ಯವಹಾರವನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮಗ ನನ್ನ ಸಹಿ ಮಾಡಿದ ಖಾಲಿ ಚೆಕ್ಕನ್ನು ಜನಸ್ನೇಹಿ ಕಂಪನಿಗೆ ತೆಗೆದುಕೊಂಡು ಹೋಗಿದ್ದನು ಪಿರ್ಯಾದಿದಾರು ದುರುಪಯೋಗಪಡಿಸಿಕೊಂಡು ವಿಷಯವನ್ನು ನನಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೋಟಿಸ ಬಂದಾಗಲೇ ತಿಳಿದಿರುತ್ತದೆ. ನೋಟಿಸ ಪಡೆದುಕೊಂಡ ಬಳಿಕ ಪಿರ್ಯಾದಿಯವರ ವಿರುದ್ದ ಯಾವುದೇ ದೂರನ್ನು ನೀಡಿರುವುದಿಲ್ಲ. ನೋಟಿಸಗೆ ಉತ್ತರವನ್ನು ನೀಡುವ ಕಾಲದಲ್ಲಿ ಈ ಮೇಲೆ ಹೇಳಿದ ರೀತಿಯಲ್ಲಿ ಪಿರ್ಯಾದಿಯು ದುರುಪಯೋಗ ಪಡಿಸಿಕೊಂಡ ವಿಷಯವನ್ನು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಪಿರ್ಯಾದಿದಾರರು, ಸಹೋದರಿ ಹಾಗೂ ಅವರ ತಾಯಿ ಒತ್ತಾಯಪೂರ್ವಕವಾಗಿ ನಿಶಾನೆ ಪಿ 1 ಚೆಕ್ಕನ್ನು ನಮ್ಮ ಮನೆಗೆ ಬಂದು ನನ್ನಿಂದ ಒತ್ತಾಯಪೂರ್ವಕವಾಗಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ.

ಪಿರ್ಯಾದಿಯಿಂದ ಪಡೆದುಕೊಂಡ ಹಣವನ್ನು ಮರುಪಾವತಿ ಮಾಡದೇ ಇರುವ ಉದ್ದೇಶದಿಂದ ಬೇರೆ ಬೇರೆ ಸುಳ್ಳು ಕತೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ 1 ಚೆಕ್ಕನ್ನು ಪಿರ್ಯಾದಿಗೆ ನೀಡಿದ್ದರೂ ಸಹ ಜನಸ್ನೇಹಿ ಕಂಪನಿಗೆ ನೀಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರ ಚೆಕ್ಕನ್ನು ನನ್ನ ಮಗನಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮಗನು ಸಹ ಪಿರ್ಯಾದಿದಾರರ ವಿರುದ್ದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ದೂರನ್ನು ನೀಡಿಲ್ಲ ಎಂದರೆ ಸರಿ. ನಾನು ಪಿರ್ಯಾದಿದಾರರಿಗೆ ಹಣ ಮರುಪಾವತಿಯ ಸಲುವಾಗಿ ಚೆಕ್ಕನ್ನು ನೀಡಿದ್ದರಿಂದ ಪಿರ್ಯಾದಿಯ ವಿರುದ್ದ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನನಗೆ ಈಗ ತೋರಿಸಿದ ನಿಶಾನೆ ಪಿ 6 ರಲ್ಲಿರುವ ಸಹಿಗಳನ್ನು ಎರಡು ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳು ನನ್ನ ಇಬ್ಬರೂ ಮಕ್ಕಳ ಸಹಿಗಳಾಗಿರುತ್ತವೆ ಅವುಗಳನ್ನು ಕ್ರಮವಾಗಿ ನಿಶಾನೆ ಪಿ 6ಸಿ ಮತ್ತು 6ಡಿ ಎಂದು ಗುರುತಿಸಲಾಯಿತು. ನಾನು ಪಿರ್ಯಾದಿದಾರರಿಂದ ಹಣ ಪಡೆದುಕೊಂಡಿದ್ದು, ಅದಕ್ಕೆ ಸಂಬಂಧಿಸಿದಂತೆ ಬಾಂಡ್ ನ್ನು ಮಾಡಿಕೊಂಡಿದ್ದು, ಅದರ ಮರುಪಾವತಿಗೊಸ್ಕರ ನಿಶಾನೆ ಪಿ 1 ಚೆಕ್ಕನ್ನು ಪಿರ್ಯಾದಿದಾರರಿಗೆ ನಾನೇ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ..ದಂ.ನ್ಯಾ..ಬೈಲಹೊಂಗಲ